# 4-7

# ಸ್ತೋತ್ರಾರ್ಪಣೆ ಮತ್ತು ಪ್ರಾರ್ಥನೆ

ಪೌಲನು ತನ್ನ ಪತ್ರಿಕೆಗಳನ್ನು ವೈಶಿಷ್ಟ್ಯವಾಗಿ ಒಂದು ಸ್ತೋತ್ರಾರ್ಪಣೆ ಮತ್ತು ಪ್ರಾರ್ಥನೆಯ ಹೇಳಿಕೆಯೊಂದಿಗೆ ಆರಂಭಿಸುತ್ತಿದ್ದನು. ಇದೊಂದು ಆತನಿಗೆ ಯಾವಾಗಲೂ ಅನುಸರಿಸುತ್ತಿದ್ದ ಮಾನದಂಡವಾಗಿತ್ತಾದರೂ, ನಾವು ಅದನ್ನು ಕೇವಲ ಒಂದು ರೂಢಿ ಅಥವಾ ಸಂದೇಶದ "ಸ್ವಾರಸ್ಯವಾದ ಭಾಗ"ಕ್ಕೆ ನಡಿಸುವ ಒಂದು ಸಭ್ಯ ರೀತಿಯಷ್ಟೆ ಆಗಿತ್ತೆಂಬದಾಗಿ ಯೋಚಿಸಬಾರದು. ಬದಲಾಗಿ, ಸ್ತೋತ್ರಾರ್ಪಣೆ ಮತ್ತು ಪ್ರಾರ್ಥನೆ ಅನೇಕ ಸಾರಿ ಮುಖ್ಯ ಚರ್ಚಯಾಂಶಗಳನ್ನು ಪರಿಚಯಿಸುತ್ತಿದ್ದವು, ಅವುಗಳ ಬಗ್ಗೆಯೇ ಪೌಲನು ಪತ್ರಿಕೆಯ ಮುಖ್ಯಭಾಗದಲ್ಲಿ ಸವಿಸ್ತಾರವಾಗಿ ಬರೆಯುತ್ತಿದ್ದನು. ಇದನ್ನು ಈ ಕೆಳಗಿನ ನಕ್ಷೆಯ ಮೂಲಕ ತೋರ್ಪಡಿಸಲ್ಪಟ್ಟಿರುತ್ತದೆ. ಅದು ಪೌಲನು ತನ್ನ ಆರಂಭಿಕ ಕೃತಜ್ಞತಾಸ್ತುತಿ ಮತ್ತು ಪ್ರಾರ್ಥನೆಗಳಲ್ಲಿ (ವಚನಗಳ 4-7) ಪತ್ರಿಕೆಯ ಪ್ರಮುಖ ವಿಭಾಗದಲ್ಲಿನ ಮುಖ್ಯ ಪದಗಳ (ವಚನಗಳು 8-22) ಪರಿಚಯ ಮಾಡುವದನ್ನು ಗಮನಕ್ಕೆ ತರುತ್ತದೆ.

## ಫಿಲೆಮೋನನಿಗೆ ಪತ್ರಿಕೆಯಲ್ಲಿನ ಮುಖ್ಯ ಪದಗಳು

| ಮುಖ್ಯ ಪದಗಳು | ಸ್ತೋತ್ರಾರ್ಪಣೆ ಮತ್ತು ಪ್ರಾರ್ಥನೆ (ವಚನಗಳು 4–7) | ಪತ್ರಿಕೆಯ ಪ್ರಮುಖ ಭಾಗ (ವಚನಗಳು 8–22) |
|---|---|---|
| "ಪ್ರಾರ್ಥನೆಮಾಡು ವಾಗಲೆಲ್ಲಾ" | ವ. 4 | ವ. 22 |
| "ಪ್ರೀತಿ" | ವಚನಗಳು 5, 7 | ವ. 9 |
| "ಅನ್ಯೋನ್ಯತೆ" | ವ. 6 | ವ. 17 |
| "ಸುವರಗಳು" | ವ. 6 | ವ. 14 |
| "ಹೃದಯಗಳಿಗೆ" | ವ. 7 | ವಚನಗಳು 12, 20 |
| "ಪ್ರೋತ್ಸಾಹ" | ವ. 7 | ವ. 20 |
| "ಸಹೋದರನೇ" | ವ. 7 | ವ. 20 |

**[5]ಕರ್ತನಾದ ಯೇಸುವಿನ ಮೇಲೆ ನೀನು ಇಟ್ಟಿರುವ ನಂಬಿಕೆಯನ್ನು ಕುರಿತೂ ದೇವಜನರೆಲ್ಲರ ಮೇಲಿರುವ ನಿನ್ನ ಪ್ರೀತಿಯನ್ನು ಕುರಿತೂ ಕೇಳಿದ್ದರಿಂದ [4]ನಾನು ಪ್ರಾರ್ಥನೆಮಾಡುವಾಗಲೆಲ್ಲಾ ದೇವರಿಗೆ ಯಾವಾಗಲೂ ಸ್ತೋತ್ರ ಸಲ್ಲಿಸಿ ನಿನಗೋಸ್ಕರ ವಿಜ್ಞಾಪನೆ ಮಾಡುತ್ತೇನೆ. [6]ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸುತ್ತೇನೆ. [7]ಸಹೋದರನೇ, ನಿನ್ನ ಮೂಲಕ ದೇವಜನರ ಹೃದಯಗಳಿಗೆ ಪ್ರೋತ್ಸಾಹ ಉಂಟಾದದರಿಂದ ನಿನ್ನ ಪ್ರೀತಿಯ ನಿಮಿತ್ತ ನನಗೆ ಬಹಳ ಸಂತೋಷವೂ ಆದರಣೆಯೂ ಉಂಟಾದವು.**

**ವಚನ 4. ನಾನು . . . ದೇವರಿಗೆ . . . ಸ್ತೋತ್ರ ಮಾಡುತ್ತೇನೆ** ಎಂಬುದು ಪೌಲನು ತನ್ನ ಪತ್ರಿಕೆಯ ಈ ವಿಭಾಗವನ್ನು ಆರಂಭಿಸುವದರ ಸಾಮಾನ್ಯ ಸೂತ್ರವಾಗಿತ್ತು (ನೋಡಿರಿ ರೋಮಾ 1:8; 1 ಕೊರಿಂಥ 1:4; ಫಿಲಿಪ್ಪಿ 1:3). ವಚನದ ಮಧ್ಯಭಾಗದಲ್ಲಿ **ಯಾವಾಗಲೂ** ಎಂಬುದು ಕಾಣಿಸಿಕೊಳ್ಳುತ್ತದೆ ಮತ್ತು ಅದು ಎಷ್ಟು ಸಾರಿ ಪೌಲನು ಸ್ತೋತ್ರ ಅರ್ಪಿಸುತ್ತಿದ್ದನೆಂಬದನ್ನು (NASB; NIV; RSV) ಅಥವಾ ಆತನು ಸ್ವೀಕರ್ತರನ್ನು ಎಷ್ಟೊಂದು ಸಾರಿ ತನ್ನ ಪ್ರಾರ್ಥನೆಗಳಲ್ಲಿ ನೆನಪಿಸಿಕೊಳ್ಳುತ್ತಿದ್ದನೆಂಬುದನ್ನು ಹೇಳುವದಾಗಿರುತ್ತದೆಂದು ಅರ್ಥಮಾಡಿಕೊಳ್ಳಬಹುದು (KJV). **ಪ್ರಾರ್ಥನೆಮಾಡುವಾಗಲೆಲ್ಲಾ . . . ನಿನಗೋಸ್ಕರ ವಿಜ್ಞಾಪನೆ ಮಾಡುತ್ತೇನೆ** ಎಂಬುದು ಅಪೊಸ್ತಲನು, ಅವರಿಗೋಸ್ಕರವಾದ ತನ್ನ ನಿರಂತರವಾದ ಪ್ರಾರ್ಥನೆಗಳ ಮೂಲಕವಾಗಿ, ತನಗೆ ಪರಿಚಯವಿದ್ದ ಕ್ರೈಸ್ತರು ಹಾಗೂ ತಾನು ಸ್ಥಾಪಿಸಿದ್ದ ಸಭೆಗಳೊಂದಿಗೆ ಬಲವಾದ ಸಂಬಂಧವನ್ನು ಕಾಪಾಡಿಕೊಂಡಿದ್ದನು ಎಂಬುದನ್ನು ಜ್ಞಾಪಕ ಪಡಿಸುವಿಕೆಯಾಗಿತ್ತು. ಸೆರೆಮನೆಯು ಆತನನನ್ನು ಶಾರೀರಿಕವಾಗಿ ಬೇರ್ಪಡಿಸಿದ್ದಾಗ್ಯೂ, ಅವರ ನಡುವಿನ ಅನ್ಯೋನ್ಯತೆಯ ಬಂಧವನ್ನು ಪ್ರಾರ್ಥನೆಯು ಕಾಪಾಡಿಕೊಂಡು ಹೋಗುವದಾಗಿತ್ತು.

ಈ ವಚನದಲ್ಲಿ ಒಂದು ಮುಖ್ಯವಾದ ಬದಲಾವಣೆ ಸಂಭವಿಸುತ್ತದೆ. ವಂದನೆ ಹೇಳುವದರಲ್ಲಿ, ಪೌಲ ಮತ್ತು ತಿಮೊಥೆ ಎಂಬ ಇಬ್ಬರು ವ್ಯಕ್ತಿಗಳಿಂದ, ಮೂವರು ಹೆಸರಿಸಲ್ಪಟ್ಟ ವ್ಯಕ್ತಿಗಳನ್ನು, ಮಾತ್ರವಲ್ಲದೆ ಇಡೀ ಸಭೆಯನ್ನು ಸಂಬೋಧನೆ ಮಾಡಲಾಗಿತ್ತು. ಅದು 4ನೇ ವಚನದಲ್ಲಿ ಬದಲಾಗುತ್ತದೆ, ಅಲ್ಲಿ ಪೌಲನು ಉತ್ತಮ ಪುರುಷ ಏಕವಚನ ರೂಪದಲ್ಲಿ ("ನಾನು") ಎಂದು ಕೇವಲ ಫಿಲೆಮೋನನನ್ನು ಉದ್ದೇಶಿಸಿ ಮಾತಾಡಲಾರಂಬಿಸುತ್ತಾನೆ.[1] ಈ ಪತ್ರಿಕೆಗಾಗಿ ಸನ್ನಿವೇಶವು ತಿಜಮೊಥೆ, ಅಪ್ಫಿಯಳು, ಅರ್ಖಿಪ್ಪ, ಮತ್ತು ಕೊಲೊಸ್ಸೆಯಲ್ಲಿನ ಇಡೀ ಸಭೆಯನ್ನೊಳಗೊಂಡಿತ್ತು, ಆದರೆ ಪ್ರಾಥಮಿಕ ಭಾಗಿಗಳೆಂದರೆ ಪೌಲ ಹಾಗೂ ಫಿಲೆಮೋನನ ಆಗಿದ್ದರು.

**ವಚನ 5.** ಈ ದಯೆಯಿಂದ ಕೂಡಿದ, ಪ್ರೋತ್ಸಾಹಕರ ಮಾತುಗಳು ಫಿಲೆಮೋನನ ಆತ್ಮವನ್ನು ಶಾಂತಗೊಳಿಸಿರಬಹುದಾಗಿದೆ. ಅಪೊಸ್ತಲನು ಹೀಗೆ ಬರೆಯುತ್ತಾನೆ, **. . . ನೀನು ಇಟ್ಟಿರುವ ನಂಬಿಕೆಯನ್ನು ಕುರಿತೂ . . . ಪ್ರೀತಿಯನ್ನೂ ಕುರಿತೂ ಕೇಳಿದ್ದರಿಂದ.** ಈ ಪತ್ರಿಕೆಯು ಕೊಲೊಸ್ಸೆಯಲ್ಲಿನ ಪರಿಸ್ಥಿತಿಯ ಕುರಿತು ಎಪಫ್ರ ಮತ್ತು ಒನೇಸಿಮನಿಂದ ಸುದ್ದಿಯನ್ನು

ತಿಳಿದುಕೊಂಡಿದ್ದ ಒಬ್ಬ ವ್ಯಕ್ತಿಯಿಂದ ಬಂದಿರುವದಾಗಿತ್ತು (ಕೊಲೊಸ್ಸೆ 1:7, 8; ಫಿಲೆಮೋನನಿಗೆ 23). ಅವರು ಫಿಲೆಮೋನನ ಬಗ್ಗೆ ಏನು ಹೇಳಿರಬಹುದು? ಒನೇಸಿಮ ಮತ್ತು ಆತನ ಯಜಮಾನರನ್ನೊಳಗೊಂಡಿದ್ದ ಸಮಸ್ಯೆಯ ಕಾರಣದಿಂದಾಗಿ ಪೌಲನು ಆತನ ಬಗ್ಗೆ ಅಲ್ಪವಾಗಿ ಭಾವಿಸಿದ್ದನೋ? ಫಿಲೆಮೋನನಿಗೆ ಮುಂದೆ ಕೆಲವು ಕ್ಷಣಗಳಲ್ಲಿ ಎಲ್ಲರ ಎದುರಿನಲ್ಲಿ ಬೈಗಳುಗಳು ಸಿಕ್ಕುತ್ತಿದ್ದವೋ? ಅಂಥ ಅಂಜಿಕೆಗಳನ್ನು ಈ ದೃಢೀಕರಿಸುವ ವಚನದ ಮೂಲಕ ಹೋಗಲಾಡಿಸಲಾಯಿತು.

ಪೌಲನು ಪುನಃ ಫಿಲೆಮೋನನಿಗೆ **ಕರ್ತನಾದ ಯೇಸುವಿನ ಮೇಲೆ** ಮತ್ತು **ದೇವಜನರೆಲ್ಲರ ಮೇಲಿರುವ** ಪ್ರೀತಿ ಹಾಗೂ ನಂಬಿಕೆಯ ಬಗ್ಗೆ ತಿಳಿಯಪಡಿಸುತ್ತಾನೆ. ಇದು ಗ್ರೀಕ್ ಸಾಹಿತ್ಯದಲ್ಲಿ ಆಗಾಗ ಕಾಣಿಸಿಕೊಳ್ಳುವಂಥ, *chiasmus* (*χ*, *chi* ಎಂಬ ಗ್ರೀಕ್ ಅಕ್ಷರದಿಂದ ಬಂದದ್ದು) ಎಂದು ಕರೆಯಲ್ಪಡುವ ಒಂದು ಸಾಹಿತ್ಯಕ ಸಾಧನಕ್ಕೆ ಒಂದು ಉದಾಹರಣೆಯಾಗಿ ತೋರುತ್ತದೆ. ಈ ಪದವಿನ್ಯಾಸದಲ್ಲಿ, ಮೊದಲ ಹಾಗೂ ನಾಲ್ಕನೆಯ ಪದಗುಚ್ಛಗಳು ಒಂದಕ್ಕೊಂದು ಸಂಬಂಧ ಹೊಂದಿರುತ್ತವೆ, ಅದೇ ರೀತಿಯಲ್ಲಿ ಎರಡನೆಯ ಹಾಗೂ ಮೂರನೆಯ ಪದಗಳು ಸಹ ಇರುತ್ತವೆ (a-b-b-a). ಈ ಸಂದರ್ಭದಲ್ಲಿ, ಫಿಲೆಮೋನನ ಪ್ರೀತಿಯು "ದೇವಜನರೆಲ್ಲ"ರಿಗೆ ಸಂಬಂಧಿಸಿರುತ್ತದೆ. ಆತನ ನಂಬಿಕೆಯು "ಕರ್ತನಾದ ಯೇಸು"ವಿಗೆ ಸಂಬಂಧಿಸಿರುತ್ತದೆ.

a—"ನಿನ್ನ ಪ್ರೀತಿ"
b—"ನೀನು ಪಟ್ಟಿರುವ ನಂಬಿಕೆ"
b—"ಕರ್ತನಾದ ಯೇಸುವಿನ ಮೇಲೆ"
a—"ದೇವಜನರೆಲ್ಲರ ಮೇಲಿರುವ"

ಫಿಲೆಮೋನನು "ಕರ್ತನಾದ ಯೇಸುವಿನ ಮೇಲೆ . . . ಇಟ್ಟಿದ್ದ ನಂಬಿಕೆ" ಮತ್ತು ಆತನಿಗೆ "ದೇವಜನರೆಲ್ಲರ ಮೇಲಿರುವ . . . ಪ್ರೀತಿ" ಎರಡೂ ಈ ಪತ್ರಿಕೆಯಲ್ಲಿರುವ ಮಹತ್ವಪೂರ್ಣವಾದ ಚರ್ಚೆಯಾಂಶಗಳಾಗಿರುತ್ತವೆ.

ಕ್ರೈಸ್ತರ ಬಗ್ಗೆ ಮಾತಾಡುವಾಗ "ದೇವಜನರು" ಎಂಬುದು ಪೌಲನು ಬಳಸುವ ಆತನ ನೆಚ್ಚಿನ ಮಾತಾಗಿತ್ತು. ಅಕ್ಷರಶಃ "ಪರಿಶುದ್ಧರು" ಎಂದಾಗಿದ್ದು, ಹೊಸ ಒಡಂಬಡಿಕೆಯಲ್ಲಿ "ದೇವಜನರು" ಎಂದರೆ ನಂಬಿಕೆಯ ವಿಶೇಷವಾದ ವೀರರೆಂದಲ್ಲ, ಆದರೆ ದೇವರು ಯೇಸುವಿನ ರಕ್ತದ ಮೂಲಕವಾಗಿ ಕ್ರೈಸ್ತರನ್ನು ಏನು ಮಾಡಿದ್ದಾನೆಂಬದನ್ನು ಸೂಚಿಸುವದಾಗಿರುತ್ತದೆ (ನೋಡಿರಿ ರೋಮಾ 1:7; 16:15).

**ವಚನ 6. ಪ್ರಾರ್ಥಿಸುತ್ತೇನೆ** ಎಂಬುದು ವಾಸ್ತವಿಕವಾಗಿ ಗ್ರೀಕ್ ವಾಕ್ಯದಲ್ಲಿರುವದಿಲ್ಲ; ಈ ಪದಗಳು ವಾಕ್ಯರಚನೆಯನ್ನು ಉತ್ತಮಗೊಳಿಸುವ ಉದ್ದೇಶದಿಂದ ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿರುತ್ತವೆ. "ಪ್ರಾರ್ಥಿಸುತ್ತೇನೆ" ಎಂಬುದು 4ನೇ ವಚನದಲ್ಲಿರುವ "ನಾನು ಪ್ರಾರ್ಥನೆಮಾಡುವಾಗಲೆಲ್ಲಾ . . . ನಿನಗೋಸ್ಕರ ವಿಜ್ಞಾಪನೆ ಮಾಡುತ್ತೇನೆ" ಎಂಬುದರ ಪುನರಾವರ್ತನೆಯಾಗಿರುತ್ತದೆ.

ಪೌಲನು ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು

ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚೆಚ್ಚಾದ ಮಹಿಮೆಯನ್ನು ಉಂಟುಮಾಡಬೇಕೆಂದು ಪ್ರಾರ್ಥಿಸಿದನು. Joseph A. Fitzmyer ಹೀಗೆ ಹೇಳಿದ್ದು ಸರಿಯಾಗಿಯೇ ಇರುತ್ತದೆ, "ಇಡೀ ಪತ್ರಿಕೆಯಲ್ಲಿಯೇ ಈ ವಚನವು ಅರ್ಥಮಾಡಿಕೊಳ್ಳುವದಕ್ಕೆ ಅತ್ಯಂಥ ಕಷ್ಟಕರವಾಗಿರುವ ವಚನವಾಗಿರುತ್ತದೆ."[2] ಹೇಗೂ, ಇಲ್ಲಿ ಎದುರಿಸಲಾಗಿರುವ ಸಮಸ್ಯೆಗಳ ಹೊರತಾಗಿಯೂ, ಆಗಾಧವಾದ ಶಬ್ದಬಂಡಾರವು ವಾಚಕನನ್ನು ಮುಂದೆ ಬರಲಿದ್ದ ಸಂದೇಶಕ್ಕಾಗಿ ಸಿದ್ಧಗೊಳಿಸುವದನ್ನು ಮುಂದುವರೆಸಿತ್ತು.

ಈ ಸನ್ನಿವೇಶದಲ್ಲಿ NIVಯು ಪೌಲನು ಫಿಲೆಮೋನನನ್ನು "[ತನ್ನ] ನಂಬಿಕೆಯನ್ನು ಹಂಚಿಕೊಳ್ಳುವದರಲ್ಲಿ ಸಕ್ರಿಯನಾಗಿರುವಂತೆ" ಪ್ರೋತ್ಸಾಹಿಸುತ್ತಿರುವನೆಂಬದಾಗಿ ಅನುವಾದಿಸಿರುತ್ತದೆ. ಹೇಗೂ, ಈ ಸಂದೇಶವು ಇಂದು ಬಳಸಲ್ಪಡುವ ಭಾಷೆಯಂತೆ ಹೇಳುವದಾದರೆ, ಫಿಲೆಮೋನನು ಹೆಚ್ಚು ಸುವಾರ್ತಿಕ ಮನೋಭಾವವುಳ್ಳವನಾಗಿರುವಂತೆ ತಿಳಿಸುವ ಇಂಗಿತವನ್ನು ಹೊಂದಿರಲಿಲ್ಲ. "ಅನ್ಯೋನ್ಯತೆ" (κοινωνία, *koinōnia*) ಎಂಬುದು "ಒಬ್ಬನ ಸಂಪನ್ಮೂಲಗಳನ್ನು ಹಂಚಿಕೊಳ್ಳುವದು," ಅಥವಾ "ಒಟ್ಟಾಗಿ ಹಂಚಿಕೊಳ್ಳುವದು," ಅಥವಾ "ಕೊಡುವದು" ಎಂಬ ಯೋಚನೆಯನ್ನು ಸೂಚಿಸುತ್ತದೆ. ಫಿಲೆಮೋನನ ನಂಬಿಕೆಯು ಒಂದು ಖಾಸಗಿ ವಿಚಾರವಾಗಿರಲಿಲ್ಲ; ಅದು ಪೌಲನೊಂದಿಗೆ, ಒನೇಸಿಮನೊಂದಿಗೆ, ಮತ್ತು ಫಿಲೆಮೋನನ ಮನೆಯಲ್ಲಿ ಕೂಡಿ ಬರುತ್ತಿದ್ದ ಸಭೆಯೊಂದಿಗೆ ಹಂಚಿಕೊಳ್ಳತಕ್ಕದ್ದಾಗಿತ್ತು. ಫಿಲೆಮೋನನು ಈಗಾಗಲೇ ತನ್ನ ಮನೆಯನ್ನು ಸಹೋದರರೊಂದಿಗೆ ಹಂಚಿಕೊಂಡಿದ್ದನು. ಈಗ ಆತನು ಒಬ್ಬ ದಾಸನ-ಯಜಮಾನನಾಗಿರುವದರ ಪರಿಣಾಮಗಳ ಕುರಿತು ಆಲೋಚಿಸುತ್ತಿರುವ ವೇಳೆ, ತನ್ನ ನಂಬಿಕೆಯನ್ನು ಸಹ ಅವರೊಂದಿಗೆ ಹಂಚಿಕೊಳ್ಳುವಂತೆ ಕರೆ ನೀಡಲ್ಪಡುತ್ತಿದ್ದಾನೆ.

"ಪರಿಣಾಮಕಾರಿ" ಎಂಬುದು ಗ್ರೀಕ್ ನ ἐνεργής (*energēs*) ಎಂಬ ಪದದ ಅನುವಾದವಾಗಿರುತ್ತದೆ, ಅದರಿಂದಲೇ ಆಂಗ್ಲದ "energy" ಎಂಬ ಪದವು ಬಂದಿರುತ್ತದೆ. ಅದರರ್ಥವು "ಕಾರ್ಯಕ್ಕೆ ಅನುಕೂಲವಾದ" (1 ಕೊರಿಂಥ 16:9) ಅಥವಾ "ಕಾರ್ಯಸಾಧಕ" (ಇಬ್ರಿಯ 4:12) ಎಂದಾಗಿರಬಹುದಾಗಿದೆ. *Energēs* ಶಕ್ತಿಗೆ, "ಸಾಮರ್ಥ್ಯವನ್ನು ಕಾರ್ಯರೂಪದಲ್ಲಿ ವ್ಯಕ್ತಪಡಿಸುವಿಕೆ"[3] ಎಂಬುದಕ್ಕೆ ಸಂಬಂದ ಪಟ್ಟದ್ದಾಗಿದೆ. ಈ ಪತ್ರಿಕೆಯಲ್ಲಿ ಪೌಲನು ಮಾಡುವ ಮನವಿಗೆ ಫಿಲೆಮೋನನು ಸಕಾರಾತ್ಮಕವಾಗಿ ಪ್ರತಿಕ್ರಿಯೆಯನ್ನು ತೋರದಿದ್ದಲ್ಲಿ, ಸ್ವತಃ ಆತನ ನಂಬಿಕೆಯು ಪರಿಣಾಮವಿಲ್ಲದ್ದಾಗಿ, ನಿಷ್ಕ್ರಿಯವಾದದ್ದಾಗಿ, ಮತ್ತು ಬಲಹೀನವೆಂಬದಾಗಿ ತನ್ನನ್ನು ಸಾಭಿತುಪಡಿಸಿಕೊಳ್ಳುವ ದಾಗಿತ್ತು. ಇನ್ನೊಂದೆಡೆಯಲ್ಲಿ, ದೀನತೆಯಿಂದ ಆಲಿಸಿ ಒನೇಸಿಮನ ವಿಷಯದಲ್ಲಿ ಧೈರ್ಯದಿಂದ ಸರಿಯಾದ ರೀತಿಯಲ್ಲಿ ಕಾರ್ಯವನ್ನು ಮಾಡಿದ್ದರೆ, ಆತನು ಖಂಡಿತವಾಗಿಯೂ ಯಾರೊಂದಿಗೆ ತನ್ನ ನಂಬಿಕೆಯನ್ನು ಹಂಚಿಕೊಂಡನೋ ಅವರೆಲ್ಲರಿಗೂ ಒಂದು ಆಶೀರ್ವಾದವಾಗುವನು.

"ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ" (ವ. 6) ಎಂಬುದು ಬೌದ್ಧಿಕ ತಿಳುವಳಿಕೆಗಿಂತಲೂ ಹೆಚ್ಚಾಗಿ ಅನುಭವಿಸಿ ನೋಡಿದ ಯಾವದೋ ಒಂದರ ತೀಕ್ಷ್ಣವಾದ ವಾಸ್ತವಿಕತೆಯೆಂದು

ತೋರಿಸಿ ಕೊಡುತ್ತದೆ. "ನಿನ್ನಲ್ಲಿ" ಎಂಬುದು ಅನಿಶ್ಚಿತತೆಯ ವಾಕ್ಯವನ್ನೊಳಗೊಂಡಿದ್ದು ಅದರಲ್ಲಿ ಬಹುವಚನದ "ನಿಮ್ಮಲ್ಲಿ" ಎಂದೋ (NASB; KJV) ಅಥವಾ ಬಹುವಚನದ "ನಮ್ಮಲ್ಲಿ" ಎಂದೋ (ನೋಡಿರಿ NIV; RSV) ಎಂಬ ಎರಡರಲ್ಲಿ ಯಾವದಾದರೂ ಒಂದು ಇರುವ ಸಾಧ್ಯತೆಯಿದೆ. ಪತ್ರಿಕೆಯ ಸಾಮಾನ್ಯ ಸೂತ್ರಕ್ಕೆ ಹೋಲಿಸಿದರೆ ಇಲ್ಲಿ ಬಹುವಚನವು ಕಾಣಿಸಿಕೊಳ್ಳುವದು ಹೊರತಾದದ್ದಾಗಿದೆ, ಆದರೆ ಇದು ನಿರೀಕ್ಷಿತವಾದದ್ದು ಯಾಕೆಂದರೆ ಚರ್ಚೆಯ ವಿಷಯವು ಅನ್ಯೋನ್ಯತೆಯನ್ನು ಹಂಚಿಕೊಳ್ಳುವ ಕುರಿತಾಗಿರುತ್ತದೆ.

"ಕ್ರಿಸ್ತನಿಗೋಸ್ಕರ" ಎಂಬುದು ಅಕ್ಷರಶಃ "ಕ್ರಿಸ್ತನಲ್ಲಿ" ಅಥವಾ "ಕ್ರಿಸ್ತನೊಳಗೆ" ಎಂದಾಗಿರುತ್ತದೆ. ಇಡೀ ವಚನದ ವಿಷಯವಾಗಿ James D. G. Dunn ಈ ಮುಕ್ತಾಯಕ್ಕೆ ಬರುತ್ತಾನೆ,

> ಹಂಚಿಕೊಂಡಿರುವ ನಂಬಿಕೆಯ ಸಂಘಟಿತ ಗುಣವು ಯೋಚನೆಯ ಕೇಂದ್ರಬಿಂದುವಾಗಿರುತ್ತದೆ; ಧಾರ್ಮಿಕ ನಂಬಿಕೆಯನ್ನು ಒಂದು ಖಾಸಗಿ ವಿಚಾರ, ಒಬ್ಬನು ಏಕಾಂಗಿಯಾಗಿ ಆನಂದಿಸುವಂಥ ಮತ್ತು ಒಬ್ಬ ಪ್ರತ್ಯೇಕ ವ್ಯಕ್ತಿಯಾಗಿ ಆಚರಿಸುವ ವಿಚಾರವಾಗಿ ಉತ್ತೇಜಿಸುವದಕ್ಕೆ ಮನಸ್ಸುಳ್ಳವನಾಗಿರಲಿಲ್ಲ.[4]

ಒಟ್ಟಾರೆಯಾಗಿ, ಪೌಲನು ಈ ಕೆಳಗಿನಂತಿರುವ ರೀತಿಯಲ್ಲಿ ಹೇಳುತ್ತಿರುವ ಹಾಗೆ ತೋರುತ್ತದೆ:

> ಫಿಲೆಮೋನನೆ, ನಾನು ನಿನಗೋಸ್ಕರ ಮಾಡುವ ಪ್ರಾರ್ಥನೆಯಲ್ಲಿ ನೀನು ಎಷ್ಟೋ ಸೌಜನ್ಯತೆಯಿಂದ ನಿನ್ನ ಮನೆಯನ್ನು ಮತ್ತು ನಿನ್ನ ಜೀವನವನ್ನು ಕೊಲೊಸ್ಸೆಯಲ್ಲಿರುವ ಸಭೆಯೊಂದಿಗೆ ಹಂಚಿಕೊಂಡಿರುವ ರೀತಿಯು ಸೇರಿರುತ್ತದೆ. ಈಗ, ನಾನು ನಿನಗೆ ಮುಂದೆ ಹೇಳಲಿರುವದರ ಬೆಳಕಿನಲ್ಲಿ, ಅಂಥ ಸೌಜನ್ಯಶೀಲವಾದ ಹಂಚಿಕೊಳ್ಳುವಿಕೆಯನ್ನು ಒನೇಸಿಮನ ಕಡೆಗೆ ಸಹ ತೋರಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ. ದೇವಜನರ ಅನ್ಯೋನ್ಯತೆಯಲ್ಲಿ ನಂಬಲಸಕ್ಯವಾದ ಒಳ್ಳೇತನವು ಇರುತ್ತದೆ. ಅದರಲ್ಲಿ ಎಷ್ಟು ಸತ್ಯವೆಂಬದನ್ನು ನಾವು ನೋಡುವದಕ್ಕೆ ಸಾಧ್ಯವಾದಲ್ಲಿ, ನಾವು ಆಶ್ಚರ್ಯಗೊಳ್ಳುವೆವು. ಕೆಲವು ಸಾರಿ, ಸಮಸ್ಯೆಗಳು ಮತ್ತು ವ್ಯಾಜ್ಯಗಳ ನಡುವೆ, ಅದನ್ನು ನಾವು ಮರೆತು ಹೋಗುತ್ತೇವೆ. ಈಗ, ನಿನ್ನ ಜೀವನದಲ್ಲಿ ದೇವರು ಏನು ಮಾಡುತ್ತಿರುವನೆಂಬುದರ ಸಣ್ಣ ಸುಳಿವು ಸಹ ನಿನಗೆ ಸಿಕ್ಕುವದಾದರೆ, ನೀನು ಹಿಂದೆಂದೂ ತಿಳಿದಿರದಂತ ಒಂದು ಅನ್ಯೋನ್ಯತೆಯ ಆಗಾಧತೆಯನ್ನು ಅನುಭವಿಸುವಿ. ಈ ನಿರ್ಣಾಯಕವಾದ ಕ್ಷಣದಲ್ಲಿ, ಬೇರೆಯವರನ್ನು ಹೊರಕ್ಕೆ ದೊಬ್ಬಿ ಬಿಡಬೇಡ. ಒನೇಸಿಮನೊಂದಿಗಿರುವ ಈಗಿನ "ಸಮಸ್ಯೆ"ಯು ವಾಸ್ತವಿಕವಾಗಿ ಕ್ರಿಸ್ತನೊಂದಿಗಿನ ನಿನ್ನ ನಡೆಯಲ್ಲಿ ಇನ್ನಷ್ಟು ಬೆಳೆಯುವದಕ್ಕಾಗಿ ನಿನಗೆ ದೊರಕಿರುವ ಅದ್ಭುತವಾದ ಅವಕಾಶವಾಗಿರುತ್ತದೆ. ನಾವು ಮಾಡುವ ಎಲ್ಲದರಲ್ಲಿಯೂ ಕರ್ತನಾದ ಯೇಸುವು ಮಹಿಮೆ ಹೊಂದುವಂತಾಗಲಿ!

**ವಚನ 7.** 6ನೇ ವಚನದಲ್ಲಿ ಪೌಲನು ಮಾಡುವ ಪ್ರಾರ್ಥನೆಯಲ್ಲಿ 7ನೇ ವಚನವು ಭಾಗವಾಗಿರುತ್ತದೋ ಅಥವಾ ಇಲ್ಲವೋ ಎಂಬುದು ವಾಗ್ವಾದ ಮಾಡಲ್ಪಟ್ಟಿರುತ್ತದೆ. ಪ್ರಾರ್ಥನೆಗಳು 8ನೇ ವಚನದಲ್ಲಿರುವ ಪೌಲನ ವಿನಂತಿಯ ಕಡೆಗೆ ತಿರುಗಿಕೊಳ್ಳುವದರಿಂದ, ಇದೊಂದು "ಕೀಲು" ಪಾತ್ರವನ್ನು ನಿರ್ವಹಿಸುತ್ತದೆಂದು ತೋರುತ್ತದೆ. 7ನೇ ವಚನವು

ಫಿಲೆಮೋನನಿಗೆ ಸಮರ್ಥನೆಯನ್ನು ನೀಡುವದರಿಂದ ತುಂಬಿಕೊಂಡಿರುತ್ತದೆ, ಅಪೊಸ್ತಲನು ಒನೇಸಿಮನ ಪರವಾಗಿ ಮಾತಾಡುವ ಸೂಕ್ಷ್ಮವಾದ ಕೆಲಸವನ್ನು ಆರಂಭಿಸುವ ಮುನ್ನ ಆತನಲ್ಲಿ ಪೌಲನು ಭರವಸೆಯನ್ನು ಹೊಂದಿದ್ದಾನೆಂಬುದನ್ನು ಖಚಿತ ಪಡಿಸುವದಾಗಿತ್ತು. ಇಲ್ಲಿ ಫಿಲೆಮೋನನ ಕುರಿತಾಗಿ ಹೇಳಲ್ಪಟ್ಟಿರುವದು ತಮ್ಮ ಬಗ್ಗೆ ಸಹ ಹೇಳಲ್ಪಡಬಹುದಾಗಿದೆ ಎಂದು ಎಲ್ಲಾ ಕ್ರೈಸ್ತರು ನಿರೀಕ್ಷಿಬಹುದು.

ಅಪೊಸ್ತಲನು **ನಿನ್ನ ಪ್ರೀತಿಯ ನಿಮಿತ್ತ ನನಗೆ ಬಹಳ ಸಂತೋಷವೂ ಆದರಣೆಯೂ ಉಂಟಾದವು** ಎಂದು ಹೇಳುತ್ತಾನೆ. "ಸಂತೋಷ"ವು ದೇವರ ಪವಿತ್ರಾತ್ಮನ ಫಲವಾಗಿರುತ್ತದೆ (ಗಲಾತ್ಯ 5:22) ಮತ್ತು ಒಬ್ಬ ವ್ಯಕ್ತಿಯ ಜೀವನದಲ್ಲಿ ಆತನ ಪ್ರಸನ್ನತೆಯಿರುವದರ ಸೂಚನೆ ಆಗಿರುತ್ತದೆ. ಪೌಲನು ಫಿಲೆಮೋನನನ್ನು ಜ್ಞಾಪಿಸಿಕೊಂಡ ವೇಳೆಯಲ್ಲಿ, ಆತನು ಖಂಡಿತವಾಗಿಯೂ ನಸುನಗೆ ತೋರಿರುತ್ತಾನೆ. ಪೌಲನು ಫಿಲೆಮೋನನಿಗೆ ಸ್ಪುಟವಾಗಿಯೂ ಸಕಾರಾತ್ಮಕವಾಗಿಯೂ ಅನ್ವಯಗೊಳಿಸಿದ ಇನ್ನೊಂದು ಪದವು "ಆದರಣೆ" ಎಂದಾಗಿರುತ್ತದೆ. ಇಲ್ಲಿ ಬಳಸಲ್ಪಟ್ಟಿರುವ ಗ್ರೀಕ್ ಪದವನ್ನು "ಸಾಂತ್ವನ" ಮತ್ತು "ಮತ್ತೊಬ್ಬನನ್ನು ಉತ್ಸಾಹ ಪಡಿಸುವದು"[5] ಎಂದು ಸಹ ಅನುವಾದಿಸಬಹುದಾಗಿದೆ. ಫಿಲೆಮೋನನು ತನ್ನ "ಜೊತೆಗೆಲಸದವನು" (ವ. 1) ಆಗಿರುವದರಿಂದ ತಾನು ಇನ್ನಷ್ಟು ಬಲಗೊಂಡವನು ಮತ್ತು ಸಂತೋಷದಿಂದಿರುವವನು ಎಂಬದಾಗಿ ತೋರ್ಪಡಿಸಿಕೊಳ್ಳುತ್ತಾನೆ. ಸಂತೋಷ ಮತ್ತು ಆದರಣೆಗಳು ಫಿಲೆಮೋನನ ಪ್ರೀತಿಯಿಂದ ಬಂದವುಗಳಾಗಿದ್ದವು. ಎರಡು ವಚನಗಳ ಬಳಿಕ, ಪೌಲನು ಒನೇಸಿಮನ ಪರವಾಗಿ ಇದೇ ಪ್ರೀತಿಯಿಂದಾಗಿ ಬೇಡಿಕೊಳ್ಳುತ್ತಾನೆ (ವ. 9).

ಪೌಲನು **ದೇವಜನರ ಹೃದಯಗಳ** ಕುರಿತು ಮಾತಾಡುತ್ತಾನೆ. ಮೂರು ಸಂದರ್ಭಗಳೊಳಗೆ ಇದೇ ಮೊದರ ಬಾರಿಗೆ ಮಾನವ ಭಾವನೆಗಳ ತಾಣವನ್ನು ಸೂಚಿಸುವದಕ್ಕೆ ಗ್ರೀಕ್‌ನ ಬಲವಾದ ನಾಮಪದವನ್ನು *σπλάγχνα* (*splagchna*) ಬಳಸುತ್ತಾನೆ (ನೋಡಿರಿ ವಚನಗಳು 12, 20). ಅ ಪದದ ಅಕ್ಷರಶಃ ಅರ್ಥವು "ಒಳಗಿನ ಅಂಗಗಳು, ಕರುಳುಗಳು"[6] ಎಂದಾಗಿರುತ್ತದೆ. ಇಂದು ಈ ಪದವನ್ನು ವ್ಯಕ್ತಪಡಿಸಬಹುದಾದ ಒಂದು ವಿಧವೆಂದರೆ "ಹೃದಯದ ಅಂತಃರಾಳ" ಎಂದಾಗಿರುತ್ತದೆ. ಅವರ ಹೃದಯಗಳಲ್ಲಿ, ದೇವಜನರು **ಪ್ರೋತ್ಸಾಹಗೊಂಡಿದ್ದರು** (ಪುನಶ್ಚೈತನಗೊಳಿಸಲ್ಪಟ್ಟಿದ್ದರು). ಗ್ರೀಕ್ ಕ್ರಿಯಾಪದವಾಗಿರುವ *ἀναπαύω* (*anapauō*) ಎಂಬದರಿಂದ ಅನುವಾದಿ ಸಲ್ಪಟ್ಟದ್ದಾಗಿದ್ದು, ಈ ಪದವು "ಒಬ್ಬನಿಗೆ ಬಿಡುವಿಲ್ಲದ ದುಡಿತದಿಂದ ಉಪಶಮನ ಹೊಂದಿಕೊಳ್ಳುವಂತೆ ಮಾಡು, . . . ವಿಶ್ರಮಿಸುವಂತೆ ಮಾಡು, (ಒಬ್ಬನಿಗೆ) ವಿಶ್ರಾಂತಿ ಒದಗಿಸು, ಪುನಶ್ಚೈತನಗೊಳಿಸು"[7] ಎಂದರ್ಥವನ್ನು ಕೊಡುತ್ತದೆ. ಅನ್ಯೋನ್ಯತೆಯ ಬಲವಾದ ಕೃತ್ಯಗಳು ಮತ್ತು ಔದಾರ್ಯತೆಯಲ್ಲಿ ವ್ಯಕ್ತವಾಗಿದ್ದ, ಫಿಲೆಮೋನನ ಪ್ರೀತಿಯು, ದೇವಜನರ ಆತ್ಮಗಳನ್ನು ಪುನಶ್ಚೈತನಗೊಳಿಸಿತ್ತು.

**ಸಹೋದರನೇ, ನಿನ್ನ ಮೂಲಕ** ಎಂಬುದು ಈ ಪತ್ರಿಕೆಯ ಪರಿಚಯ ಭಾಗವನ್ನು ಮುಕ್ತಾಯಗೊಳಿಸುತ್ತದೆ. "ಸಹೋದರನೇ," ಎಂಬುದು ಒಂದು ರೂಢಿಯಿಲ್ಲದ ಮಾತಾಗಿದ್ದು, ಪೌಲನು ಅದನ್ನು ಫಿಲೆಮೋನನು ತನ್ನ ದಾಸನಾದ ಒನೇಸಿಮನನ್ನು ಹೇಗೆ ಕಾಣಬೇಕೆಂದು – ಒಬ್ಬ ಸಹೋದರನಂತೆ (ವ. 16) – ಬಣ್ಣಿಸುವದಕ್ಕೆ ಬಳಸಲ್ಪಟ್ಟಿರುವದರಿಂದ, ಆ ಪದವು

ವಿಶೇಷವಾದ ಅರ್ಥವನ್ನು ಪಡೆದುಕೊಳ್ಳುತ್ತದೆ.

## ಅನ್ವಯಿಸುವಿಕೆ

### ನಿನ್ನ ನಂಬಿಕೆಯನ್ನು ಹಂಚಿಕೊಳ್ಳುವದು (ವ. 6)

ಕ್ರೈಸ್ತ ನಂಬಿಕೆಯು ಎಂದಿಗೂ ಒಂದು ಖಾಸಗಿ ವಿಚಾರವಾಗಿರಬೇಕೆಂದು ಉದ್ದೇಶಿಸಲಲ್ಪಟ್ಟಿದ್ದಾಗಿರಲಿಲ್ಲ. ಆರಂಭದಿಂದಲೂ, ಅದು ಸಮುದಾಯದಲ್ಲಿ ಅನುಭವಿಸಬೇಕಾದದ್ದಾಗಿತ್ತು (ಅಪೊಸ್ತಲರ ಕೃತ್ಯಗಳು 2:41–47). ಪ್ರಥಮ ಕ್ರೈಸ್ತರು ಒಟ್ಟಾಗಿ ಪ್ರಾರ್ಥಿಸುತ್ತಿದ್ದರು, ಊಟ ಮಾಡುತ್ತಿದ್ದರು, ಆರಾಧಿಸುತ್ತಿದ್ದರು, ಹಂಚಿಕೊಳ್ಳುತ್ತಿದ್ದರು, ಕೊಂಡಾಡುತ್ತಿದ್ದರು, ಮತ್ತು ಬಾಧೆಯನ್ನನುಭವಿಸಿದರು. ಒಬ್ಬಂಟಿಗನಾದ ಕ್ರೈಸ್ತನು ಎಂಬ ವಿಚಾರವು ಯೋಚಿಸಲಾಗದ ಸಂಗತಿಯಾಗಿತ್ತು.

ಒಂದು ಕಾಲದಲ್ಲಿ ಯೋಚಿಸುವದಕ್ಕೂ ಸಾಧ್ಯವಿಲ್ಲದಂಥದ್ದು ಈಗ ಸರ್ವಸಾಧಾರಣವಾಗಿ ಆಚರಿಸಲ್ಪಡುವ ಸಂಗತಿಯಾಗಿರುತ್ತದೆ. "ಒಂದು ವೈಯಕ್ತಿಕ ನಂಬಿಕೆ"ಯನ್ನು ಹೊಂದಿರುವದೆಂದರೆ ಪ್ರತಿಯೊಬ್ಬ ಕ್ರೈಸ್ತನ ಅತ್ಯಂಥ ಶ್ರೇಷ್ಠ ಸಾಧನೆಯೆಂಬಂತೆ ಅನೇಕರಿಂದ ಕಾಣಲ್ಪಡುತ್ತಿದೆ, ಮತ್ತು ಅನ್ಯೋನ್ಯತೆಯನ್ನು ಒಂದು ಐಚ್ಛಿಕವಾದ ಬೆಲೆಯಿಲ್ಲದ ಸಾಮಗ್ರಿ ಎಂಬಂತೆ ನೋಡಲಾಗುತ್ತಿದೆ. ಕೆಲವರಂತೂ "ಯೇಸು, ಹೌದು! ಸಭೆ, ಇಲ್ಲ!" ಎಂದು ಹೇಳುವಷ್ಟರ ಮಟ್ಟಿಗೆ ಧೈರ್ಯವಂತರಾಗಿ ರುತ್ತಾರೆ.

ಈ ಅತಿರೇಕದ ಸ್ವಾಯತ್ತತೆಯಂತಹ ಸಾಂಸ್ಕೃತಿಕ ವಿಷಕ್ಕೆ ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆಯು ಒಂದು ಶಕ್ತಿಶಾಲಿಯಾದ ವಿಷಹಾರಿ ಅಥವಾ ಪ್ರತಿವಿಷ ಆಗಿರುತ್ತದೆ. ಫಿಲೆಮೋನನಿಗೆ ಒಂದು ಸಮಸ್ಯೆಯಿತ್ತು. ಆತನ ದಾಸನಾದ ಒನೇಸಿಮನು ಓಡಿ ಹೋಗಿದ್ದನು ಮತ್ತು ತನ್ನ ಯಜಮಾನನಿಗೆ ಬಹಳಷ್ಟು ಪ್ರಮಾಣದಲ್ಲಿ ಹಣದ ನಷ್ಟವನ್ನುಂಟು ಮಾಡಿದ್ದನು. ಆತನು ಅವನಿಂದ ಕದ್ದುಕೊಂಡಿರಲೂ ಬಹುದಾಗಿದೆ (ವ. 18). ಪೌಲನು ಒನೇಸಿಮನನ್ನು ಆತನ ಯಜಮಾನನ ಬಳಿಗೆ ಕಳುಹಿಸಿದಾಗ, ಅವರು ಸಂಧಾನಗೊಳ್ಳುವಿಕೆಗೆ ಸಹಾಯವನ್ನು ಒದಗಿಸುವದಕ್ಕೆ ಆತನೊಂದಿಗೆ ಫಿಲೆಮೋನನಿಗಾಗಿ ಒಂದು ಪತ್ರಿಕೆಯನ್ನು ಕಳುಹಿಸಿದನು. ಆ ಪತ್ರಿಕೆಯಲ್ಲಿ ಪೌಲನು ಫಿಲೆಮೋನನನ್ನು ದಯೆಯಿಂದ ಕೂಡಿದ ಸಮರ್ಥಿಸುವಿಕೆಯ ಮಾತುಗಳಿಂದ ಪ್ರೋತ್ಸಾಹಿಸಿ ಹೀಗೆ ಬರೆಯುತ್ತಾನೆ, "ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕಾರ್ಯಸಾಧಕವಾಗಲಿ . . . ಎಂದು ಪ್ರಾರ್ಥಿಸುತ್ತೇನೆ." ಬೇರೆ ಮಾತುಗಳಲ್ಲಿ ಹೇಳುವದಾದರೆ, ನಂಬಿಕೆಯು ಇರುವದು ಹಂಚಿಕೊಳ್ಳುವದಕ್ಕಾಗಿಯೇ ಆಗಿದೆ.

ಫಿಲೆಮೋನನ ಎದುರಿಗಿದ್ದ ಕಾಡುವಂಥ ಸಮಸ್ಯೆಯು ಆತನೊಬ್ಬನೇ ನಿಭಾಯಿಸುವಂಥದ್ದಾಗಿರಲಿಲ್ಲ. ಅದು ಸಭೆಯಲ್ಲಿರುವ ಮಿಕ್ಕವರೊಂದಿಗೆ ಹಂಚಿಕೊಳ್ಳಬೇಕಾಗಿದ್ದ ನಂಬಿಕೆಯ ಒಂದು ವಿಚಾರವಾಗಿತ್ತು. ಕ್ರೈಸ್ತರಾದ ನಾವು ಮಾಡಬೇಕಾದದ್ದೆಲ್ಲವನ್ನು "ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟುಮಾಡುವದಕ್ಕೆ" ಮಾಡುವವರಾಗಿ, ನಾವು ಸಮುದಾಯದಲ್ಲಿ ಜೀವಿಸುತ್ತೇವೆ, ಕಲಿಯುತ್ತೇವೆ, ಮತ್ತು ಬೆಳೆಯುತ್ತೇವೆ – ಹೊರತು ಏಕಾಂಗಿಯಾಗಿ ಅಲ್ಲ.

## ಕಷ್ಟಕರವಾದ ಜನರು (ವ. 6)

ಪ್ರತಿಯೊಬ್ಬರೂ ಕಷ್ಟಕರವಾಗಿರುವ ಜನರೊಂದಿಗೆ ವ್ಯವಹರಿಸಬೇಕಾಗುತ್ತದೆ. ಯಾರೊಬ್ಬರೂ ಅವರಿಂದ ತಪ್ಪಿಸಿಕೊಳ್ಳಲಾಗದು! ಪ್ರತಿಯೊಂದು ಸಭೆಯು, ಯಾವ ಗಾತ್ರದಲ್ಲಿದ್ದರೂ ಸರಿಯೇ, ಕನಿಷ್ಠ ಒಬ್ಬ ವ್ಯಕ್ತಿಯನ್ನಾದರೂ ಹೊಂದಿರುತ್ತದೆ – ಆತನ ಗೊಣಗಾಟ, ಟೀಕಿಸುವಿಕೆ, ಗುಣಗುಟ್ಟುವಿಕೆ ಅಥವಾ ಸ್ವಾರ್ಥಚಿಂತೆಯು ಒಂದು ಸಭೆಯಲ್ಲಿನ ದೊಡ್ಡ ಪ್ರಮಾಣದ ಸಭಿಕರ ಶಕ್ತಿಯನ್ನು ಮತ್ತು ಸಂಪನ್ಮೂಲವನ್ನು ಹೀರಿಕೊಳ್ಳುತ್ತದೆ. ದೇವರು ಈ "ದುಬಾರಿಯಾದ ನಿರ್ವಹಣೆ" ಜನರನ್ನು ಒಂದೇ ಸ್ಥಳದಲ್ಲಿ ಇಟ್ಟು ಮಿಕ್ಕವರನ್ನೆಲ್ಲಾ ಏಕೆ ಅವರ ಪಾಡಿಗೆ ಅವರನ್ನು ಬಿಟ್ಟು ಬಿಡಲಿಲ್ಲ?

ಆರಂಭದಲ್ಲಿ, ಕಷ್ಟಕರವಾದ ಜನರಿಲ್ಲದ ಸಭೆಯ ಒಂದು ಕಲ್ಪನೆಯು ಆಕರ್ಷಕವಾಗಿ ತೋರಬಹುದು. ಹೇಗೂ, ಇನ್ನಷ್ಟು ಪುನರಾಲೋಚನೆ ಮಾಡುವದಾದರೆ, ಕಷ್ಟಕರವಾದ ಜನರು (ಮತ್ತು ಕಷ್ಟಕರವಾದ ಪರಿಸ್ಥಿತಿಗಳು) ಬೇರೆ ಎಲ್ಲರನ್ನೂ ಬೆಳೆಯುವಂತೆ ಸಹಾಯ ಮಾಡುತ್ತಾರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ತಾಳ್ಮೆಯು ಪರೀಕ್ಷಿಸಲ್ಪಡದಿದ್ದಲ್ಲಿ, ಯಾವನೇ ಆಗಲಿ ಆ ತಾಳ್ಮೆಯಲ್ಲಿ ಹೇಗೆ ಬೆಳೆಯುವದಕ್ಕೆ ಸಾಧ್ಯ? ಯಾವನೇ ಆಗಲಿ ಮೊದಲು ನೋವು ಪಡಿಸಲ್ಪಡದಿದ್ದರೆ, ಆತನು ಹೇಗೆ ಕ್ಷಮಾಗುಣದಲ್ಲೆ ಬೆಳೆಯುವದಕ್ಕೆ ಸಾಧ್ಯವಾಗುತ್ತದೆ? ಬರೆದಿರಬಹುದಾದ ತಪ್ಪುಗಳು ಸಂಭವಿಸದಿದ್ದರೆ ಯಾವನೇ ಆಗಲಿ ಹೇಗೆ ತಪ್ಪುಗಳನ್ನು ಲೆಕ್ಕದಲ್ಲಿಟ್ಟುಕೊಳ್ಳದಿರುವದನ್ನು ಕಲಿತುಕೊಳ್ಳುವದಕ್ಕಾಗುವದು? ವಾಸ್ತವಿಕದಲ್ಲಿ ಕಷ್ಟಕರವಾದ ಜನರು ಮತ್ತು ಕಷ್ಟಕರವಾದ ಪರಿಸ್ಥಿತಿಗಳು ದೇವರು ಸಭೆಗೆ ಕೊಟ್ಟಿರುವಂಥ ಅತ್ಯಂಥ ಶ್ರೇಷ್ಠ ವರಗಳಲ್ಲಿ ಒಂದಾಗಿರಬಹುದಾಗಿದೆ.

ಸಭೆಗಳು ಅದೆಷ್ಟು ಸಾರಿ ಆಗಾಗ ವ್ಯಕ್ತಿಗಳ ನಡುವಿನ ವ್ಯಾಜ್ಯಗಳನ್ನು ಎದುರಿಸುತ್ತವೆಂಬುದನ್ನು ಫಿಲೆಮೋನನಿಗೆ ಬರೆದ ಪತ್ರಿಕೆಯು ಜ್ಞಾಪಕಕ್ಕೆ ತರುತ್ತದೆ. ಅನೇಕ ಸಾರಿ, ಸಮಸ್ಯೆಗಳು ಉದ್ಭವವಾಗುವ ವೇಳೆ, ಜನರು ಗಾಬರಿಗೊಂಡವರಾಗುತ್ತಾರೆ ಮತ್ತು ಹತಾಶೆಯಿಂದ ಕೈ ಹಿಂಡಿಕೊಳ್ಳಲಾರಂಭಿಸುತ್ತಾರೆ, ಆದಾಗ್ಯೂ ಕಷ್ಟಗಳು ಸಭೆಗೆ ಬೆಳೆಯುವದಕ್ಕಾಗಿ ಒಂದು ಅದ್ಭುತವಾದ ಸದವಕಾಶವನ್ನು ಒದಗಿಸುತ್ತವೆ. ಪೌಲನು ಸಂಭಾವ್ಯವಾದ ಸ್ಫೋಟನಾತ್ಮಕ ಪತ್ರಿಕೆಯನ್ನು ಫಿಲೆಮೋನನಿಗೆ ಬರೆಯುವ ವೇಳೆ, ಆತನು ಈ ನೋವುಕರವಾದ ಸಮಸ್ಯೆಯು ಸಭೆಯನ್ನು ಎಲ್ಲಿಗೆ ಕೊಂಡೊಯ್ಯಬಹುದೆಂಬ ಶ್ರೇಷ್ಠವಾದ ಸಾಧ್ಯತೆಗಳನ್ನು ಕಂಡನು. ಸಮಸ್ಯೆಯು ಪರಿಹರಿಸಲ್ಪಡಬೇಕು, ಫಿಲೆಮೋನನು ಕ್ರೈಸ್ತ ನಂಬಿಕೆಯನ್ನು ಇನ್ನಷ್ಟು ಆಳವಾಗಿ ಅನುಭವಿಸುವಂತಾಗಬೇಕು, ತನ್ನ ನಂಬಿಕೆಯನ್ನು ಇನ್ನಷ್ಟು ನಿಜವಾದ ರೀತಿಯಲ್ಲಿ ಹಂಚಿಕೊಳ್ಳುವಂತಾಗಲಿ, ಮತ್ತು ಆತನ ಚೈತನ್ಯದಾಯಕ ಮಾದರಿಯ ಮೂಲಕವಾಗಿ ಸಭೆಯನ್ನು ಬಲಗೊಳಿಸಲಿ ಎಂಬುದು ಪೌಲನ ಪ್ರಾರ್ಥನೆಯಾಗಿತ್ತು. ಒಂದು ಬಿಕ್ಕಟ್ಟು ಸಭೆಯೊಂದಕ್ಕೆ ಸಂಭವಿಸಬಹುದಾದ ಅತ್ಯುತ್ತಮ ಸಂಗತಿಯಾಗಿರಬಲ್ಲದು.

## ನಮಗೆ ಪರಸ್ಪರರ ಅಗತ್ಯವಿದೆ (ವ. 6)

ಒಂದು ಅದ್ಭುತವಾದ ಹಳೆಯ ಕಥೆಯೊಂದು ಒಂದು ನದಿಯ ದಡದಲ್ಲಿ ಬಿಡು ಬಿಟ್ಟಿದ್ದ ದೇಶೀಯ ಅಮೆರಿಕ್ನರ ಬುಡಕಟ್ಟು ಜನಾಂಗದ ಬಗ್ಗೆ ಹೇಳುತ್ತದೆ. ಒಂದು ದಿನ ಅವರು ಮೇಲಕ್ಕೆ ನೋಡಿದಾಗ ಅವರ ಮೇಲೆ ಆಕ್ರಮಣವನ್ನು ಮಾಡುವದಕ್ಕೆ ವೈರಿಗಳು ಬೆಟ್ಟವನ್ನು

ಇಳಿದು ಬರುತ್ತಿರುವದನ್ನು ಕಂಡರು. ಅವರು ಅತ್ತಿತ್ತ ಹೋಗಲಾದಂತೆ ಸಿಕ್ಕಿಕೊಂಡಿದ್ದರು; ವಿಸ್ತಾರವಾಗಿದ್ದ ಸಮುದ್ರವು ಬಹಳ ರಭಸವಾಗಿ ಹರಿಯುವದಾಗಿದ್ದು ಅತಿ ಬಲಿಷ್ಠನು ಸಹ ಶಕ್ತಿಶಾಲಿ ಅಲೆಗಳಿಂದ ಬಡಿದುಕೊಂಡು ಹೋಗದಂತೆ ಈಜಿ ಆಚೆ ದಡವನ್ನು ತಲುಪುವದಕ್ಕೆ ಅಸಾಧ್ಯವೆಂಬುದು ಪ್ರತಿಯೊಬ್ಬರಿಗೂ ಗೊತ್ತಿತ್ತು. ಅವರಿಗೆ ಬೇರಾವ ಆಯ್ಕೆಯೂ ಇರಲಿಲ್ಲವಾದ ಕಾರಣ, ಬಲಿಷ್ಠರಾದ ಯೋಧರು ಕಿರಿಯರನ್ನು ಹಾಗೂ ದುರ್ಬಲರನ್ನು ತಮ್ಮ ಭುಜಗಳ ಮೇಲೆ ಹೊತ್ತುಕೊಂಡು ನೀರಿನಲ್ಲಿ ದಾಟಲಾರಂಭಿಸಿದರು. ಅವರಿಗೆ ಆಶ್ಚರ್ಯವಾಗುವ ರೀತಿಯಲ್ಲಿ, ಅವರು ಸುರಕ್ಷಿತವಾಗಿ ಆ ಕಡೆಯ ದಡವನ್ನು ಮುಟ್ಟಿದ್ದರು. ಯೋಧರ ಮೇಲೆ ಕುಳಿತಿದ್ದ ಕಿರಿಯರು ಹಾಗೂ ದುರ್ಬಲರ ಭಾರವು ಯೋಧರ ಕಾಲುಗಳು ನದಿಯ ತಳದಲ್ಲಿ ಸುರಕ್ಷಿತವಾಗಿ ನೆಲೆಯೂರುವಂತೆ ಮಾಡುವದಕ್ಕೆ ಸಾಕಾದದ್ದಾಗಿತ್ತೆಂದು ತೋರುತ್ತದೆ. ಬುಡಕಟ್ಟು ಜನಾಂಗದಲ್ಲಿ, ದುರ್ಬಲರು ಮತ್ತು ಬಲಿಷ್ಠರು ಇಬ್ಬರೂ, ಅವರ ಬದುಕುಳಿಯುವದಕ್ಕಾಗಿ ಪರಸ್ಪರ ಅಗತ್ಯವಾಗಿದ್ದರು.

### "ನಮ್ಮ ಕುರಿತಾದ ಯಾವದೊಂದನ್ನೂ ನೀವು ಇಷ್ಟ ಪಡುವದಿಲ್ಲವೋ?" (ವ. 7)

ಒಮ್ಮೆ ಒಬ್ಬ ಬೋಧಕನು ಬೃಹತ್ ಪಟ್ಟಣವೊಂದರಲ್ಲಿ ವಾಸಿಸುತ್ತಿದ್ದನು ಮತ್ತು ಭಾನುವಾರಗಳಲ್ಲಿ ಬೋಧಿಸುವದಕ್ಕಾಗಿ ಚಿಕ್ಕ ಗ್ರಾಮ ಸಭೆಗೆ ವಾಹನ ಚಲಾಯಿಸಿಕೊಂಡು ಹೋಗಿ ಬರುತ್ತಿದ್ದನು. ಆತನು ಈ ಸಭಿಕರಿಗೆ ಹಲವಾರು ತಿಂಗಳುಗಳಿಂದ ಬೋಧನೆಯನ್ನು ಮಾಡುತ್ತಿದ್ದವನಿಗೆ ಒಂದು ಭಾನುವಾರದ ರಾತ್ರಿಯೆಂದು ನಡೆದ ಘಟನೆಯು ಆತನು ಸೇವೆಯ ಬಗ್ಗೆ ಹೊಂದಿದ್ದ ದೃಷ್ಟಿಕೋನವನ್ನೇ ಶಾಶ್ವತವಾಗಿ ಬದಲಾಯಿಸಿ ಬಿಟ್ಟಿತ್ತು. ಒಂದು ದಿನವೆಲ್ಲಾ ಬೋಧಿಸಿದ ಬಳಿಕ ಮತ್ತು ಸಹೋದರರೊಂದಿಗೆ ಭೇಟಿಯನ್ನು ಕೊಟ್ಟ ಬಳಿಕ, ಆತನು ಮನೆಗೆ ಹೋಗುವದಕ್ಕಾಗಿ ತನ್ನ ಕಾರಿನಲ್ಲಿ ಕುಳಿತನು. ಆತನು ಪಾರ್ಕಿಂಗ್ ಜಾಗದಿಂದ ಹೊರಬೇಕೆನ್ನುವಷ್ಟರಲ್ಲಿ, ಸಭಿಕರಲ್ಲಿನ ಒಬ್ಬ ಸ್ತ್ರೀಯು ಆತನಿಗೆ ಕೈ ಸನ್ನೆ ಮಾಡಿ ಆತನೊಂದಿಗೆ ಮಾತಾಡುವದಕ್ಕೆ ಬಳಿಗೆ ಬಂದಳು. ಆತನು ತನ್ನ ಕಾರಿನ ಕಿಟಕಿಯ ಗ್ಲಾಸುಗಳನ್ನು ಇಳಿಸಿದಾಗ, ಆಕೆಯು ಅಳುತ್ತಿರುವದು ಆತನ ಗಮನಕ್ಕೆ ಬಂದಿತು. ಆತನು ಏನು ಸಮಸ್ಯೆಯೆಂದು ಕೇಳಿದಾಗ ಆಕೆಯು ಹೀಗೆ ಉತ್ತರಿಸಿದಳು, "ನಮ್ಮ ಕುರಿತಾದ *ಯಾವದೊಂದನ್ನೂ* ನೀವು ಇಷ್ಟಪಡುವದಿಲ್ಲವೋ?"

ಬೋಧಕನಿಗೆ ಆಘಾತವನ್ನುಂಟು ಮಾಡಿದ್ದ ಆ ಸ್ತ್ರೀಯ ಗ್ರಹಿಕೆಯು ಏನಾಗಿತ್ತೆಂದರೆ ಬೋಧಕನು ತನ್ನ ಪ್ರಸಂಗಗಳಲ್ಲಿ ಯಾವಾಗಲೂ ಹೇಳುದೆಲ್ಲಾ ಸಭೆಯು ಏನನ್ನು ಮಾಡುವದಕ್ಕೆ ವಿಫಲವಾಗುತ್ತಿದೆ ಎಂಬದರ ಬಗ್ಗೆಯೇ ಆಗಿತ್ತು ಎಂಬದೆ. ಆತನು ಮನೆಗೆ ಕಾರು ಚಲಾಯಿಸಿಕೊಂಡು ಹೋಗುತ್ತಾ ತನ್ನ ಮನಸ್ಸಿನಲ್ಲಿ ತಾನು ಇದುವರೆಗೂ ಬೋಧಿಸುತ್ತಾ ಬಂದಿರುವ ಪ್ರಸಂಗಗಳನ್ನು ಪುನರಾವಲೋಕನ ಮಾಡಿಕೊಂಡನು. ಆತನು ಗ್ರಾಮದ ಸಭೆಯಲ್ಲಿನ ಜನರನ್ನು ಪ್ರೀತಿಸುತ್ತಿದ್ದನಾದರೂ, ಆತನ ಪ್ರಸಂಗಗಳು ಹೆಚ್ಚುಕಡಿಮೆ ಪ್ರತ್ಯೇಕವಾಗಿ ಅವರು ಏನು ಮಾಡುತ್ತಿಲ್ಲ ಎಂಬದನ್ನೇ ಒತ್ತಿ ಹೇಳುವವುಗಳಾಗಿದ್ದವು. ಆತನು ಇನ್ನು ಮುಂದೆ ತನ್ನ ಬೋಧನೆಯಲ್ಲಿ ಹೆಚ್ಚು ಸಮತೋಲನವನ್ನು ಕಾಪಾಡಿಕೊಳ್ಳಬೇಕೆಂದು ಆ ರಾತ್ರಿಯಲ್ಲಿ ತೀರ್ಮಾನಿಸಿಕೊಂಡನು. ಕ್ರೈಸ್ತರಿಗೆ ಅವರು ಏನು ಸರಿಯಾದದ್ದನ್ನು ಮಾಡುತ್ತಿದ್ದಾರೆಂಬದರ ಬಗ್ಗೆ ಸಮರ್ಥನೆ ನೀಡುವದು ಸಹ ಅಗತ್ಯವಿರುತ್ತದೆಂಬುದನ್ನು ಈಗ ಆತನು ಅರ್ಥಮಾಡಿಕೊಂಡನು.

ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ಒಂದು ಕಠಿಣವಾದ ಸಂದೇಶವನ್ನು ಕೊಡಲಿದ್ದನು. ಆತನು ಸರ್ಕಾರ, ಕಾನೂನು, ಸಂಸ್ಕೃತಿ, ಮತ್ತು ಆರ್ಥಿಕತೆಗಳಿಗೆ ಸಂಬಂಧಿಸಿದ ಸೂಕ್ಷ್ಮತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಿತ್ತು. ಆತನು ಸಂದೇಶವು ಉತ್ತಮವಾಗಿ ಸ್ವೀಕರಿಸಿಕೊಳ್ಳಲ್ಪಡದಿದ್ದಲ್ಲಿ, ಅದು ತೀಕ್ಷ್ಣವಾದ ಕೋಪವನ್ನು ಸೃಷ್ಟಿಸಬಹುದಿತ್ತು ಮತ್ತು ಸಭೆಯಲ್ಲಿ ವಿಭಜನೆಯನ್ನು ಸಹ ಉಂಟು ಮಾಡುವ ಸಾಧ್ಯತೆಯಿತ್ತು. ಆತನು ಮುಂದಿದ್ದ ವಿವಾದಾಂಶದ ಬಗ್ಗೆ ಮಾತಾಡುವದಕ್ಕೆ ಮುಂಚೆ, ಫಿಲೆಮೋನನು ಈಗಾಗಲೇ ಕೆಲವು ಸರಿಯಾದ ಕಾರ್ಯಗಳನ್ನು ಮಾಡುತ್ತಿದ್ದಾನೆಂಬದಾಗಿ ಆತನನ್ನು ಸಮರ್ಥನೆ ಮಾಡುವದಕ್ಕೆ ಕೆಲವು ಹೇಳಿಕೆಗಳನ್ನು ನೀಡುತ್ತಾನೆ. ಆತನು ಫಿಲೆಮೋನನನ್ನು "ಪ್ರಿಯನೂ ಜೊತೆಗೆಲಸದವನೂ" ಎಂದು ಕರೆದನು (ವ. 1) ಮತ್ತು ಫಿಲೆಮೋನನು ಪ್ರೀತಿ ಹಾಗೂ ನಂಬಿಕೆಯನ್ನು ತೋರ್ಪಡಿಸಿದ ರೀತಿಗಾಗಿ ತಾನು ದೇವರಿಗೆ ಸ್ತೋತ್ರ ಮಾಡುತ್ತಾನೆಂಬದಾಗಿ ಆತನಿಗೆ ತಿಳಿಸಿದನು (ವಚನಗಳು 4, 5). ಆತನು ತನ್ನ ಉನ್ನತ್ತಕ್ಕೇರಿಸುವ ಪರಿಚಯ ಭಾಗವನ್ನು ಫಿಲೆಮೋನನು ಅನೇಕ ಸ್ಥಳಗಳಲ್ಲಿನ ಕ್ರೈಸ್ತರನ್ನು ಪ್ರೀತಿಸುವ ಮತ್ತು ಪ್ರೋತ್ಸಾಹಿಸುವ ಮೂಲಕವಾಗಿ ನನಗೆ "ಬಹಳ ಸಂತೋಷವೂ ಆದರಣೆಯೂ" ಉಂಟಾದವು ಎಂದು ಹೇಳುವ ಮೂಲಕ ಮುಕ್ತಾಯಗೊಳಿಸುತ್ತಾನೆ (ವ. 7). ಫಿಲೆಮೋನನು ಈಗಾಗಲೇ ಮಾಡುತ್ತಿರುವದನ್ನು ಪ್ರಶಂಸಿಸಿದ ಬಳಿಕ ಆತನು ಇನ್ನೂ ಏನನ್ನು ಮಾಡುವ ಅಗತ್ಯವಿದೆ ಎಂಬುದರ ಕುರಿತಾಗಿ ಪೌಲನು ಮಾತಾಡುತ್ತಾನೆ.

---

## ಅಡಿಟಿಪ್ಪಣಿಗಳು

[1]"ನೀನು" 4ನೇ ವಚನದಲ್ಲಿ ಮೊದಲ್ಗೊಳ್ಳುವ ಏಕವಚನವಾಗಿರುತ್ತದೆ ಮತ್ತು ಅದು 22ನೇ ವಚನದ ಕಡೇ ಭಾಗದಲ್ಲಿ ಬಹುವಚನವಾಗುವ ತಕನವು ಮುಂದುವರೆಯುತ್ತದೆ. ಇದಕ್ಕೆ ಹೊರತಾದ ಒಂದು ಸಾಧ್ಯತೆಯೆಂದರೆ 6ನೇ ವಚನದ ಅಂತ್ಯಭಾಗದಲ್ಲಾಗಿರುತ್ತದೆ, ಅಲ್ಲಿ ಪೌಲನು "ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ" ಎಂದು ಮಾತಾಡುತ್ತಾನೆ. [2]Joseph A. Fitzmyer, *The Letter to Philemon*, The Anchor Bible, vol. 34c (New York: Doubleday, 2000), 97. [3]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederich William Danker (Chicago: University of Chicago Press, 2000), 335. [4]James D. G. Dunn, *The Epistles to the Colossians and to Philemon: A Commentary on the Greek Text*, The New International Greek Testament Commentary (Grand Rapids, Mich.: Wm. B. Eerdmans Publishing Co., 1996), 319. [5]Bauer, 766. [6]Ibid., 938. [7]Ibid., 69.